ಓ.ಎಸ್.188/2021 ಡಿ.ಡಬ್ಲು-2
*ಭೀಮಪ್ಪ ತಂದೆ ಹನುಮಪ್ಪ*

ದಿ.17-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಆರ್.ಎಮ್. ವೈ ವಕೀಲರಿಂದ:-**

ನನಗೂ ಮತ್ತು 1ನೇ ಪ್ರತಿವಾದಿಗೆ ಒಡನಾಟ ಇರುತ್ತದೆ. ನನ್ನ ಪ್ರಮಾಣ ಪತ್ರವನ್ನು ಮರಿಯಪ್ಪ ಬರೆಸಿರುತ್ತಾನೆ. ಮರಿಯಪ್ಪ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿದ್ದಾನೆ ಎಂದು ಬರೆದಿದೆ ಎಂದರೆ ಸರಿ. ಸರ್ಕಾರ 1ನೇ ಪ್ರತಿವಾದಿಗೆ ಜಾಗ ಕೊಟ್ಟ ಬಗ್ಗೆ ದಾಖಲೆ ನೋಡಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಹಿಂದೆ ಸಾಕಷ್ಟು ಕೇಸುಗಳಿವೆ ಎಂದರೆ ನನಗೆ ಗೊತ್ತಿಲ್ಲ. ಅವರ ನಡುವೆ ಕೇಸು ಇರುತ್ತವೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. 1ನೇ ಪ್ರತಿವಾದಿ ಮನೆ ಕಟ್ಟಿರುವ ಜಾಗವನ್ನು ನೋಡಿರುತ್ತೇನೆ. 1ನೇ ಪ್ರತಿವಾದಿಯ ಮನೆ ವಾದಿಯ ಜಮೀನಿನ ಪೂರ್ವಕ್ಕೆ ಮನೆ ಇರುತ್ತದೆ ಎಂದರೆ ಸರಿ. ಪೂರ್ವಕ್ಕೆ ಸರ್ಕಾರಿ ಗುಡ್ಡ ಇದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಆದರೆ ಅಲ್ಲಿ ಗುಡ್ಡ ಇರುತ್ತದೆ ಎನ್ನುತ್ತಾರೆ. ಮರಿಯಪ್ಪನಿಗೆ ರಾಜೀವ ಗಾಂಧಿ ವಸತಿ ನಿಗಮ ವತಿಯಿಂದ ಮನೆ ಕಟ್ಟಲು ಫಲಾನುಭವಿ ಎಂದು ಆಯ್ಕೆಯಾಗಿದ್ದಾನೆ ಎಂದು ನಾನು ಬರೆಸಿರುವುದಿಲ್ಲ. 1ನೇ ಪ್ರತಿವಾದಿ ನನಗೆ ಸಾಕ್ಷಿ ಹೇಳಲು ಬರೆಸಿರುತ್ತಾರೆ ಎಂದರೆ ಸರಿ. ವಾದಿಯ ಹೊಲದ ಪೂರ್ವ ದಿಕ್ಕಿನಲ್ಲಿ ಮರಿಯಪ್ಪ ಮನೆ ಕಟ್ಟಿಸುತ್ತಿದ್ದಾನೆ ಎಂದರೆ ಸರಿಯಲ್ಲ. ಅಲ್ಲಿ 1ನೇ ಪ್ರತಿವಾದಿಯ ಯಾವುದೇ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಯಾವ ಸರ್ವೆ ನಂಬರಿನಲ್ಲಿ ಮನೆ ಕಟ್ಟುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಪೂರ್ವ ದಿಕ್ಕಿಗೆ ವಾದಿಯ ತಾಯಿಯ ಹೊಲ ಇದ್ದು ಅದಾದ ನಂತರ ಅರಣ್ಯ ಇಲಾಖೆಯ ಜಮೀನು ಇರುತ್ತದೆ ಎಂದರೆ ಸರಿ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.